**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡ ರವರು ನಿಯಮ-72ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ**

**ಸೂಚನೆ:-**

ಬೆಂಗಳೂರು ನಗರ ಜಿಲ್ಲೆ, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ಜಾಲ ಹೋಬಳಿಯಲ್ಲಿನ ನವರತ್ನ ಅಗ್ರಹಾರ, ಹುಣಸಮಾರನಹಳ್ಳಿ, ಕಾಡಗಾನಹಳ್ಳಿ, ಕಟ್ಟಿಗೇನಹಳ್ಳಿ, ತಿರುಮೇನಹಳ್ಳಿ, ಬೈಯಪ್ಪನಹಳ್ಳಿ ಹಾಗೂ ಬಾಗಲೂರು ಗ್ರಾಮಗಳಲ್ಲಿನ ಸರ್ಕಾರಿ ಜಮೀನುಗಳಿಗೆ ಸಂಬಂಧಿಸಿದಂತೆ ಈ ಗ್ರಾಮಗಳ ಕೆಲವು ಸ.ನಂ. ಗಳು ಸರ್ಕಾರಿ ಆಸ್ತಿಯಾಗಿದ್ದರೂ ಸಹ ಇಲಾಖೆಯ ಅಧಿಕಾರಿಗಳು ಖಾಸಗಿ ವ್ಯಕ್ತಿಗಳಿಗೆ ಪರಭಾರೆ ಮಾಡುತ್ತಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಹೇಳಿಕೆ:**

**1) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಕಟ್ಟಿಗೇನಹಳ್ಳಿ, ಗ್ರಾಮದ ಸ.ನಂ.28ಕ್ಕೆ ಸಂಬಂಧಿಸಿದಂತೆ :**

ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಕಟ್ಟಿಗೇನಹಳ್ಳಿ, ಗ್ರಾಮದ ಸ.ನಂ.28ರ ಜಮೀನಿಗೆ ಸಂಬಂಧಿಸಿದಂತೆ ಒತ್ತುವರಿಯಾಗಿರುವ 6-05 ಗುಂಟೆ ಸರ್ಕಾರಿ ಜಮೀನನ್ನು ದಿನಾಂಕ 29.09.2023ರಂದು ಒತ್ತುವರಿ ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲಾಗಿರುತ್ತದೆ. ಸ.ನಂ.28ರಲ್ಲಿ 2-00 ಎಕರೆ ಜಮೀನಿನ ಮಂಜೂರಾತಿಯನ್ನು ರದ್ದುಪಡಿಸಲು ವಿಶೇಷ ಜಿಲ್ಲಾಧಿಕಾರಿಗಳ ನ್ಯಾಯಾಲಯದ ಪ್ರಕರಣದ ಸಂಖ್ಯೆ.ಆರ್.ಆರ್.ಟಿ (ವೈ.ಎಲ್.ಕೆ)/ಸಿ.ಆರ್/8/19-20 ದಿನಾಂಕ:29.01.2020 ರ ಆದೇಶದ ವಿರುದ್ಧ ಮಾನ್ಯ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದಲ್ಲಿ ಸರ್ಕಾರದ ಆದೇಶ ಸಂ.ಆರ್‌ಡಿ/ಎಲ್ ಜಿಎಕ್ಸ್/ 264/2025 ದಿನಾಂಕ:24.11.2025 ರಂತೆ ಮೇಲ್ಮನವಿ ದಾಖಲಿಸಲಾಗಿರುತ್ತದೆ.

ಮುಂದುವರೆದು, ಸ.ನಂ.28 ರ 4-00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಶ್ರೀ ಮುನಿಕೆಂಪಣ್ಣ ಬಿನ್ ಪಿಳ್ಳಚನ್ನಪ್ಪ ರವರಿಗೆ ಮಂಜೂರಾಗಿರುವ ಬಾಬ್ತು ಯಾವುದೇ ದಾಖಲೆಗಳು ಲಭ್ಯವಿಲ್ಲದ ಇರುವುದರಿಂದ ಸರ್ಕಾರವು ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅಪೀಲ್ ಸಂಖ್ಯೆ: 1468/2024 C/w CCC No. 497/2024ರಂತೆ ದಾಖಲಿಸಿದ್ದ ಮೇಲ್ಮನವಿವು ದಿನಾಂಕ 11.03.2025ರಲ್ಲಿ ವಜಾಗೊಂಡಿರುತ್ತದೆ. ಸದರಿ ಆದೇಶದ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಡೈರಿ ನಂ.63603/2025ರಂತೆ ಪ್ರಕರಣ ದಾಖಲಿಸಲಾಗಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು WA No. 1468/2024ರ ಆದೇಶವನ್ನು ಎತ್ತಿ ಹಿಡಿದು ದಿನಾಂಕ: 21.11.2025 ರಂದು ಸರ್ಕಾರದ ವಿರುದ್ಧ ಹೊರಡಿಸಿರುತ್ತದೆ.

ಸದರಿ ಸರ್ವೆ ನಂ.28 ರಲ್ಲಿ 4-00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದ ಪ್ರಕರಣ.WA.1468/2024 C/W CCC No.497/2024 ದಿ:11/03/2025 ರ ಆದೇಶದಂತೆ ಶ್ರೀಮತಿ ಪಿಳ್ಳಚನ್ನಮ್ಮ ಬಿನ್ ಲೇಟ್ ಮುನಿಕೆಂಪಣ್ಣ ರವರ ಹೆಸರಿಗೆ ಎಂ.ಆರ್.ಟಿ60/2025-26, ದಿ:07/04/2026 ರಂತೆ ಖಾತೆ ದಾಖಲಾಗಿರುತ್ತದೆ. ಸದರಿ ಜಮೀನು ಸರ್ಕಾರಿ ಜಮೀನಾಗಿರುವುದರಿಂದ ಖಾತೆ ದಾಖಲಿಸುವ ಸಮಯದಲ್ಲಿ ಭೂಮಿ ತಂತ್ರಾಂಶದಲ್ಲಿ "The property is under Government Restriction" ಎಂಬುದಾಗಿ ಬರುತ್ತಿರುತ್ತದೆ. ಸದರಿ ನಮೂದನ್ನು ತೆಗೆಯುವಂತೆ ಕೋರಿ ರಿಟ್ ಅರ್ಜಿದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP No.13073/2026 ರಂತ ಪ್ರಕರಣವನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ:30/04/2026 ರ ಒಳಗಾಗಿ ಸರ್ಕಾರಿ ನಿಬಂಧನೆ ಎಂದು ಫ್ಲಾಗ್ ಸೆಟ್ ಆಗಿರುವುದನ್ನು ತೆಗೆಯುವಂತೆ ಸೂಚಿಸಿ ಆದೇಶಿಸಿರುತ್ತದೆ. ಸದರಿ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WA No. 1777/2026 ರಂತೆ ಪ್ರಕರಣ ದಾಖಲಿಸಿದ್ದು, ಪ್ರಕರಣವು ಬಾಕಿ ಇರುತ್ತದೆ. ಸದರಿ ಗ್ರಾಮದ ಜಮೀನುಗಳಿಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ರವರ ಪ್ರಕರಣ ಸಂಖ್ಯೆ:ಎಲ್.ಜಿ.ಸಿ(ಎಸ್)267/2023 ರಂತೆ ದಾಖಲಾಗಿ ಇತ್ಯರ್ಥಕ್ಕೆ ಬಾಕಿ ಇರುತ್ತದೆ.

**<u>2) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಹುಣಸಮಾರನಹಳ್ಳಿ ಗ್ರಾಮದ ಸ.ನಂ.179ಕ್ಕೆ ಸಂಬಂಧಿಸಿದಂತೆ :</u>**

ಪ್ರಸ್ತುತ ಜಮೀನಿಗೆ ಸಂಬಂಧಿಸಿದಂತೆ, ದಿನಾಂಕ:21.11.2023 ರಂದು ಪ್ರಾದೇಶಿಕ ಆಯುಕ್ತರ, ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನೀಡಿದ ನಿರ್ದೇಶನದನ್ವಯ **ವಿಶೇಷ ಜಿಲ್ಲಾಧಿಕಾರಿಗಳು ಹೊರಡಿಸಿರುವ ಆದೇಶಗಳ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 33313/2024,WP No. 34008/2024, WP No. 33429/2024 ಮತ್ತು WP No.34916/2024 ರಂತೆ ಪ್ರಕರಣ** ದಾಖಲಿಸಿದ್ದು, ಪ್ರಕರಣಗಳು **ವಿಚಾರಣೆಯಲ್ಲಿರುತ್ತವೆ.** ಸದರಿ ಗ್ರಾಮದ ಜಮೀನುಗಳಿಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ರವರ ಪ್ರಕರಣ ಸಂಖ್ಯೆ.ಎಲ್.ಜಿ.ಸಿ(ಎಸ್)267/2023 ರಂತೆ ದಾಖಲಾಗಿ ಇತ್ಯರ್ಥಕ್ಕೆ ಬಾಕಿ ಇರುತ್ತದೆ

**<u>3) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಬಾಗಲೂರು ಗ್ರಾಮದ ಸ.ನಂ.175, ಹೊಸ ಸ.ನಂ.416ರ ಜಮೀನಿಗೆ ಸಂಬಂಧಿಸಿದಂತೆ :</u>**

ಪ್ರಸ್ತುತ ಜಮೀನಿಗೆ ಸಂಬಂಧಿಸಿದಂತೆ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WA No.1149/2024. ಸಿ.ಸಿ.ಸಿ.ನಂ.251/2024. WP No. 11566/2025. WP No. 11460/2025 ರಂತೆ ಸರ್ಕಾರದ ಪರವಾಗಿ ದಾವೆ ಹೂಡಿದ್ದು, ಪ್ರಸ್ತುತ ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ಬಾಕಿ ಇರುತ್ತವೆ ಹಾಗೂ ಸ.ನಂ.176 ರ

ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದ WP No. 20817/2025 ಮತ್ತು WP No. 22337/2025 ರಂತೆ ದಾವೆ ದಾಖಲಾಗಿದ್ದು, ಸದರಿ ಪ್ರಕರಣಗಳು ವಿಚಾರಣಾ ಹಂತದಲ್ಲಿ ಬಾಕಿ ಇರುತ್ತವೆ.

**4) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಕಾಡಿಗಾನಹಳ್ಳಿ ಗ್ರಾಮದ ಸ.ನಂ.23ರ ಜಮೀನಿಗೆ ಸಂಬಂಧಿಸಿದಂತೆ :**

ಪ್ರಸ್ತುತ ಸ.ನಂ.ನಲ್ಲಿ 2-30 ಗುಂಟೆ ಸರ್ಕಾರಿ ಜಮೀನೆಂದು ಗುರುತಿಸಿದ್ದು, ಅದಕ್ಕೆ ಸರ್ಕಾರವೆಂದು ನಾಮಫಲಕ ಅಳವಡಿಸಲಾಗಿರುತ್ತದೆ. ಒಟ್ಟು ವಿಸ್ತೀರ್ಣದ ಪೈಕಿ ಹೊಸ ಸರ್ವೆ ನಂ.96 ಕ್ಕೆ 1-00 ಎಕರೆ ಜಮೀನು ದುರಸ್ತಿಗೆ ಒಳಪಡಿಸಿದ್ದು, ಈ ಸಂಬಂಧ ಸರ್ಕಾರದ ಆದೇಶದಂತೆ ಸದರಿ ಜಮೀನನ್ನು ಕರ್ನಾಟಕ ಭೂ ಮಂಜೂರಾತಿ ನಿಯಮ 1969 ರ ನಿಯಮ 25 ರಡಿ ಉದ್ದೇಶಿತ ಉದ್ದೇಶಕ್ಕೆ ಬಳಸದೇ ಇರುವುದರಿಂದ ಸದರಿ ಮಂಜೂರಾತಿಯನ್ನು ರದ್ದುಗೊಳಿಸಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲು ಕ್ರಮವಹಿಸಲಾಗಿರುತ್ತದೆ. ಉಳಿಕೆ 1-00 ಎಕರೆ ಜಮೀನನ್ನು ಅರ್ಹ ಫಲಾನುಭವಿಗಳಿಗೆ ಆಶ್ರಯ ಯೋಜನೆಯಡಿಯಲ್ಲಿ ಮಂಜೂರು ಮಾಡಲು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ರವರಿಗೆ ಹಸ್ತಾಂತರಿಸಲಾಗಿದ್ದು, ಉಳಿಕೆ 0-30 ಗುಂಟೆ ವಿಸ್ತೀರ್ಣದ ಬಗ್ಗೆ 94ಸಿಸಿ ರಡಿಯಲ್ಲಿ ಅರ್ಹ ಫಲಾನುಭವಿಗಳು ಕಟ್ಟಿರುವ ವಾಸದ ಮನೆಗಳಿಗೆ ಅನುಮತಿ ಕೋರಿದ್ದು, ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ. ಸದರಿ ಗ್ರಾಮದ ಜಮೀನುಗಳಿಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ರವರ ಪ್ರಕರಣ ಸಂಖ್ಯೆ:ಎಲ್.ಜಿ.ಸಿ(ಎಸ್)267/2023 ರಂತೆ ದಾಖಲಾಗಿ ಇತ್ಯರ್ಥಕ್ಕೆ ಬಾಕಿ ಇರುತ್ತದೆ.

**5) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಬೈಯ್ಯಪ್ಪನಹಳ್ಳಿ ಗ್ರಾಮದ ಸ.ನಂ.80ರ ಜಮೀನಿಗೆ ಸಂಬಂಧಿಸಿದಂತೆ :**

ಪ್ರಸ್ತುತ ಜಮೀನಿಗೆ ಸಂಬಂಧಿಸಿದಂತೆ, ಹಿಂದೆ ಬಗರ್ ಹುಕ್ಕುಂ ಸಾಗುವಳಿ ಸಕ್ರಮೀಕರಣಗೊಳಿಸುವ ಸಮಿತಿಯಲ್ಲಿ ಮಂಜೂರಾಗಿರುವ ಜಮೀನಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ರವರು ಸರ್ಕಾರಕ್ಕೆ ಸಲ್ಲಿಸಿರುವ ವಿಚಾರಣಾ ವರದಿಯನ್ವಯ ಸರ್ಕಾರವು ದರಖಾಸ್ತು ಪೋಡಿಯಂತೆ ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ ರವರು ಹೊರಡಿಸಿರುವ ಅಧಿಕೃತ ಜ್ಞಾಪನಕ್ಕೆ ತಡೆಯಾಜ್ಞೆ ನೀಡಿದ್ದು, ಸರ್ಕಾರವು ಸದರಿ ಸ.ನಂ. ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವಂತೆ ನಡವಳಿಯಲ್ಲಿ ಪ್ರಸ್ತಾಪಿಸಲಾಗಿದೆ. ಅದರಂತೆ ಮುಂದಿನ ನಡವಳಿಕೆ ಕ್ರಮ ವಹಿಸಲಾಗಿರುತ್ತದೆ. ಪ್ರಸ್ತಾಪಿತ ಜಾಲ ಹೋಬಳಿ, ಬೈಯಪ್ಪನಹಳ್ಳಿ ಗ್ರಾಮದ ಸರ್ವೆ ನಂ.80 ರ ಜಮೀನಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಆಯುಕ್ತರ ಪತ್ರ ಹಾಗೂ ಸರ್ಕಾರದ

ನಿರ್ದೇಶನದನ್ವಯ ಮಂಜೂರಿದಾರರು ಎಂದು ಹೇಳಲಾದ ಶ್ರೀ ಎ.ಎಸ್ ಮಣಿ ಬಿನ್ ಅಂತೋಣಿ ಕುರುಸ್ ಎಂಬುವವರ ವಿರುದ್ಧ ಈಗಾಗಲೇ ಪ್ರಾದೇಶಿಕ ಆಯುಕ್ತರ ಕಛೇರಿಯಲ್ಲಿ ಕಲಂ 56 ರಡಿ ಪ್ರಕರಣ ದಾಖಲಿಸಿಕೊಂಡು ವಿಚಾರಣಾ ಹಂತದಲ್ಲಿ ಬಾಕಿ ಇರುತ್ತದೆ. ಉಳಿದಂತೆ ಶ್ರೀಮತಿ ಶಾಂತಮ್ಮ ಕೋಂ ವೆಂಕಟರಾಮಯ್ಯ ರವರಿಗೆ 4-00 ಎಕರೆ, ಶ್ರೀ ಕೃಷ್ಣಪ್ಪ ರವರಿಗೆ 2-00 ಎಕರೆ, ಶ್ರೀಮತಿ ಸುಕನ್ಯಮ್ಮ ಕೋಂ ರಾಘವೇಂದ್ರಪ್ಪ ರವರಿಗೆ 2-00 ಎಕರೆ ಮತ್ತು ಶ್ರೀಮತಿ ವೆಂಕಟಮ್ಮ ಕೋಂ ಕೃಷ್ಣಪ್ಪ ರವರಿಗೆ 4-00 ಎಕರೆ ಜಮೀನುಗಳಿಗೆ ಮಂಜೂರಾತಿಯಾಗಿರುವ ಬಾಬ್ತು ನೈಜ್ಯತೆ ಬಗ್ಗೆ ಪರಿಶೀಲನೆ ನಡೆಸುವ ಸಂಬಂಧ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 136(3) ರಡಿ ಪ್ರಕರಣ ದಾಖಲಿಸಿಕೊಂಡು ಇತ್ಯರ್ಥಪಡಿಸಲು ವಿಶೇಷ ಜಿಲ್ಲಾಧಿಕಾರಿಗಳು ರವರಿಗೆ ಪತ್ರ ಬರೆಯಲಾಗಿದೆ. ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ. ಸದರಿ ಗ್ರಾಮದ ಜಮೀನುಗಳಿಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ರವರ ಪ್ರಕರಣ ಸಂಖ್ಯೆ:ಎಲ್.ಜಿ.ಸಿ(ಎಸ್)267/2023 ರಂತೆ ದಾಖಲಾಗಿ ಇತ್ಯರ್ಥಕ್ಕೆ ಬಾಕಿ ಇರುತ್ತದೆ.

**6) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ನವರತ್ನ ಅಗ್ರಹಾರ ಗ್ರಾಮದ ಸ.ನಂ.3, 13, 67ರ ಜಮೀನಿಗೆ ಸಂಬಂಧಿಸಿದಂತೆ :**

ಪ್ರಸ್ತುತ ಜಮೀನು ಮೂಲತ: ಇನಾಂ ಜಮೀನಾಗಿದ್ದು, ಇನಾಂ ರದ್ದಿಯಾತಿ ಕಾಯ್ದೆ 1954ರಡಿಯಲ್ಲಿ ಫಲಾನುಭವಿಗಳಿಗೆ ಮರು ಮಂಜೂರಾತಿ ಮಾಡಿರುವ ವಿರುದ್ಧ ಪ್ರಕರಣವು ಸಾರ್ವಜನಿಕ ಲೆಕ್ಕ ಪತ್ರ ಸಮಿತಿ ಮುಂದೆ ಬಂದಿದ್ದು, ಸಮಿತಿಯು ಪ್ರಸ್ತುತ ಜಮೀನನ್ನು ಸ್ಥಳ ತನಿಖೆ ನಡೆಸಿದ್ದು, ಸಮಿತಿಯಲ್ಲಿ ಪ್ರಕರಣ ತೀರ್ಮಾನಕ್ಕಾಗಿ ಬಾಕಿ ಇರುತ್ತದೆ. ಸದರಿ ಗ್ರಾಮದ ಜಮೀನುಗಳಿಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ರವರ ಪ್ರಕರಣ ಸಂಖ್ಯೆ:ಎಲ್.ಜಿ.ಸಿ(ಎಸ್)267/2023 ರಂತೆ ದಾಖಲಾಗಿ ಇತ್ಯರ್ಥಕ್ಕೆ ಬಾಕಿ ಇರುತ್ತದೆ.

**7) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಕುದುರೆಗೆರೆ ಗ್ರಾಮದ ಸರ್ವೆ ನಂ.50, 55, 59 ರ ಜಮೀನುಗಳಿಗೆ ಸಂಬಂಧಿಸಿದಂತೆ:**

ಪ್ರಸ್ತುತ ಜಮೀನಿಗೆ ಸಂಬಂಧಿಸಿದಂತೆ, ಮುಂದಿನ ನಡವಳಿಕೆ ಕೋರಿ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ರವರಿಗೆ ವಿವರವಾದ ವರದಿಯನ್ನು ಸಲ್ಲಿಸಲಾಗಿದ್ದು, ಸದರಿ ವಿಷಯವು ಮಾನ್ಯ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ರವರ ಕಛೇರಿಯಲ್ಲಿ ಬಾಕಿ ಇದ್ದು, ತೀರ್ಮಾನದ ನಂತರ ಮುಂದಿನ ನಡವಳಿಕೆ ಕ್ರಮ ಕೈಗೊಳ್ಳಲಾಗುವುದು. ಸದರಿ ಗ್ರಾಮದ ಜಮೀನುಗಳಿಗೆ, ಕರ್ನಾಟಕ ಭೂ

ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ರವರ ಪ್ರಕರಣ ಸಂಖ್ಯೆ:ಎಲ್.ಜಿ.ಸಿ (ಎಸ್)267/2023 ರಂತೆ ದಾಖಲಾಗಿ ಇತ್ಯರ್ಥಕ್ಕೆ ಬಾಕಿ ಇರುತ್ತದೆ

ಸಂಖ್ಯೆ: RD-LGQ/138/2026

(ಡಾ. ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ